# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 50 (281) |
| ಸದಸ್ಯರ ಹೆಸರು | ಶ್ರೀ ಪ್ರಕಾಶ್ ಕೆ ರಾಥೋಡ್ |
| ಉತ್ತರಿಸುವ ದಿನಾಂಕ | 03-02-2021 |
| ಉತ್ತರಿಸುವವರು | ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಒಳಪಟ್ಟಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು; ದೇವಸ್ಥಾನಗಳನ್ನು ಎಷ್ಟು ವಿಧಗಳಲ್ಲಿ ವಿಂಗಡಿಸಲಾಗಿದೆ; | ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ **34563** ದೇವಸ್ಥಾನ/ಅಧಿಸೂಚಿತ ಸಂಸ್ಥೆಗಳಿವೆ.<br><br>ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು 2002ರ ನಿಯಮ 3(1)ರಂತೆ ದೇವಾಲಯಗಳ ಆದಾಯಕ್ಕೆ ಅನುಗುಣವಾಗಿ ಈ ಕೆಳಕಂಡಂತೆ ವರ್ಗೀಕರಿಸಿದೆ. |

| ಪ್ರವರ್ಗ | ವಿವರ | ಸಂಸ್ಥೆಗಳ ಸಂಖ್ಯೆ |
|---|---|---|
| ಎ | ವಾರ್ಷಿಕ ವರಮಾನವು ರೂ ಇಪ್ಪತ್ತೈದು ಲಕ್ಷಗಳನ್ನು ಮೀರಿದ ಸಂಸ್ಥೆಗಳು | 205 |
| ಬಿ | ವಾರ್ಷಿಕ ವರಮಾನವು ರೂ ಐದು ಲಕ್ಷಗಳನ್ನು ಮೀರಿ ರೂ ಇಪ್ಪತ್ತೈದು ಲಕ್ಷಗಳನ್ನು ಮೀರದ ಸಂಸ್ಥೆಗಳು | 139 |
| ಸಿ | ವಾರ್ಷಿಕ ವರಮಾನವು ರೂ ಐದು ಲಕ್ಷಗಳನ್ನು ಮೀರದ ಸಂಸ್ಥೆಗಳು | 34219 |
| | **ಒಟ್ಟು** | **34563** |

. . . . .2

<table>
<tr>
<td>ಆ)</td>
<td>ಕಳೆದ 3 ವರ್ಷಗಳಿಂದ ದೇವಸ್ಥಾನಗಳಿಂದ ಬಂದ ಆದಾಯ ಎಷ್ಟು;</td>
<td>ಧಾರ್ಮಿಕ ದತ್ತಿ ಇಲಾಖೆಯ ಪ್ರವರ್ಗ 'ಎ' ಮತ್ತು 'ಬಿ' ದೇವಾಲಯಗಳಿಂದ 2016-17 ರಿಂದ 2018-19ರವರೆಗೆ ವಾರ್ಷಿಕ ಆದಾಯ ಒಟ್ಟು ರೂ.1481.02 ಕೋಟಿಗಳಾಗಿರುತ್ತದೆ.<br>ವಿವರ ಕೆಳಗಿನಂತಿದೆ<br>
<table>
<tr><td colspan="4">(ಮೊತ್ತ ರೂ ಕೋಟಿಗಳಲ್ಲಿ)</td></tr>
<tr><th>ವರ್ಷ</th><th>ಪ್ರವರ್ಗ 'ಎ'</th><th>ಪ್ರವರ್ಗ 'ಬಿ'</th><th>ಒಟ್ಟು</th></tr>
<tr><td>2016-17</td><td>426.42</td><td>22.31</td><td>448.73</td></tr>
<tr><td>2017-18</td><td>482.52</td><td>22.95</td><td>505.47</td></tr>
<tr><td>2018-19</td><td>505.60</td><td>21.22</td><td>526.82</td></tr>
<tr><td>ಒಟ್ಟು</td><td>1414.54</td><td>66.48</td><td>1481.02</td></tr>
</table>
ಸಮೂಹ 'ಸಿ' ಪ್ರವರ್ಗ ದೇವಾಲಯಗಳಿಗೆ, ವಾರ್ಷಿಕ ಆದಾಯವು ತುಂಬಾ ಕಡಿಮೆಯಾಗಿರುತ್ತದೆ. ಈ ದೇವಾಲಯಗಳಿಗೆ ವಾರ್ಷಿಕ ಕನಿಷ್ಠ ರೂ.48,000/- ತಸ್ತೀಕ್ /ವರ್ಷಾಸನ ಮೊತ್ತವನ್ನು ನಿಗಧಿ ಪಡಿಸಲಾಗಿರುತ್ತದೆ.</td>
</tr>
<tr>
<td>ಇ)</td>
<td>ಹಣವನ್ನು ವಿನಿಯೋಗಿಸಿರುವ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು?</td>
<td>ರಾಜ್ಯದಲ್ಲಿರುವ ಮುಜರಾಯಿ ದೇವಾಲಯಗಳಲ್ಲಿ ಬರುವ ಆದಾಯವನ್ನು ಆಯಾಯ ದೇವಾಲಯಗಳ ಸಂಬಂಧಿಸಿದ ಖಾತೆಯಲ್ಲಿ ಸಂಗ್ರಹಿಸಿ, ದೇವಾಲಯದ ನಿರ್ವಹಣೆಗೆ ನಿತ್ಯ ಕಟ್ಲೆ, ಹೆಚ್ಚು ಕಟ್ಲೆ, ರಥೋತ್ಸವ, ಸಿಬ್ಬಂದಿ ವೆಚ್ಚ, ಅಭಿವೃದ್ಧಿ ಮೂಲಭೂತ ಸೌಕರ್ಯ ಒದಗಿಸಲು ಹಾಗೂ ದೇವಾಲಯದ ವತಿಯಿಂದ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಮತ್ತು ಸಾರ್ವಜನಿಕ ಕಲ್ಯಾಣ ಉದ್ದೇಶ ಇತ್ಯಾದಿಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ 1997ರ ಕಾಯ್ದೆಯ ಕಲಂ 36(1)ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದ ಅನ್ವಯ ಬಳಸಲಾಗುತ್ತದೆ. 34563 ದೇವಾಲಯಗಳ ವೆಚ್ಚವನ್ನು, ದೇವಾಲಯವಾರು ಮಾಹಿತಿ ಪಡೆದು ಸಲ್ಲಿಸಲು ಸಾಕಷ್ಟು ಕಾಲಾವಕಾಶದ ಅವಶ್ಯಕತೆ ಇರುತ್ತದೆ.</td>
</tr>
</table>

ಸಂಖ್ಯೆ: ಕಂಇ 20 ಮುಸಪ್ರ 2021

**(ಕೋಟ ಶ್ರೀನಿವಾಸ ಪೂಜಾರಿ)**
ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ
ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.